Seshadripuram Educational Trust

# Vani

## The Voice of Excellence

ಶೈಕ್ಷಣಿಕ, ಸಾಂಸ್ಕೃತಿಕ, ತ್ರೈಮಾಸಿಕ ಪತ್ರಿಕೆ

Volume - 37
Edition - 4
July - 2025

# ವಾಣಿ

ಶೇಷಾದ್ರಿಪುರಂ ಶಿಕ್ಷಣ ದತ್ತಿ

ಶೇಷಾದ್ರಿಪುರಂ, ಬೆಂಗಳೂರು-560020
www.set.edu.in | info@set.edu




SET Academic Distinctions PG/UG/PUC/SSLC Rank Holders 2024-25 5-8



ಅಂತಾರಾಷ್ಟ್ರೀಯ ಸಂವಾದಕ್ಕೆ ಡಾ. ವೂಡೇ ಪಿ. ಕೃಷ್ಣ ಆಯ್ಕೆ 3



ಶೇಷಾದ್ರಿಪುರಂ: ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಖಾದ್ರಿ ಶಾಮಣ್ಣ ಪ್ರಶಸ್ತಿ ಪ್ರದಾನ 3




ತುಮಕೂರು: ವಾರ್ಷಿಕ ಕ್ರೀಡಾಕೂಟ 11



ಮೈಸೂರು: ಬಾಹ್ಯಾಕಾಶ ತಂತ್ರಜ್ಞಾನ ವಿಚಾರ ಸಂಕಿರಣ 11



ಬಾನು ಮುಷ್ತಾಕ್‌ರಿಗೆ ಸಂದ ಗೌರವ ಕನ್ನಡ ಸಾಹಿತ್ಯಕ್ಕೆ ಸಂದ ಗೌರವ– ಹಂಪನಾ 10



ಶೇಷಾದ್ರಿಪುರಂ ಶಿಕ್ಷಣ ದತ್ತಿಯು ಮೌಲ್ಯಯುತ ಶಿಕ್ಷಣ ನೀಡುತ್ತಿದೆ – ಸ್ವಾಮಿ ಜಪಾನಂದಜೀ ಮಹಾರಾಜ್ 12



Yelahanka: National Service Scheme State Awardees 2022-23 4



ಇತ್ತೀಚೆಗೆ ನಡೆದ ಕಾಲೇಜು ಸಮಾರಂಭದಲ್ಲಿ ಎಸ್.ಇ.ಟಿ. ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು.



ಸಿನೆಮಾ ಮನೋವಿಕಾಸಕ್ಕೆ ಅನುವು ಮಾಡಿಕೊಡುತ್ತದೆ – ಗಿರೀಶ್ ಕಾಸರವಳ್ಳಿ 10

**For Internal Circulation only**

Book-Post

To,

If undelivered, please return it to:
Editor, 'Vani' Quarterly Newsletter
Seshadripuram Educational Trust,
No.27, Nagappa Street,
Seshadripuram, Bengaluru - 560020

# Congratulations

## ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಡಾ. ಕೃಷ್ಣ



ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದಲ್ಲಿ ಕರ್ನಾಟಕ ಸರ್ಕಾರದ ರಾಜ್ಯ ಎನ್.ಎಸ್.ಎಸ್. ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಾಗೇ ಯೆನೆಪೊಯ(ಡೀಮ್ಡ್ ವಿಶ್ವವಿದ್ಯಾಲಯ) ಆಯೋಜಿಸಿದ್ದ ಅಂತಾರಾಷ್ಟ್ರೀಯ ಸಮ್ಮೇಳನ ಜಾಗತಿಕ ಯುವ ಶೃಂಗಸಭೆ–2025 ಜೂನ್ 5 ಮತ್ತು 6ನೇ ತಾರೀಖು ಯೆಂಡೆಲೆನ್ಸ್ ವಲಯ ಯೆನೆಪೋಯ ಡೀಮ್ಡ್ ವಿವಿ ಮಂಗಳೂರಿನಲ್ಲಿ ನಡೆಯಿತು. 'ಗ್ಲೋಬಲ್ ಯೂತ್ ಸಮ್ಮಿಟ್' ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ನಾಡೋಜ ವೂಡೇ ಪಿ. ಕೃಷ್ಣರವರು ಭಾಗವಹಿಸಿದ್ದರು. ಆಶಾದಾಯಕವಾದ ಭರವಸೆ ದೃಷ್ಟಿಯಿಂದ ಶಿಕ್ಷಣ ಲೋಕವನ್ನು ನೋಡುತ್ತೇನೆ. ಶಿಕ್ಷಣ ಎನ್ನುವುದು ಉಚಿತ ಕೊಡುಗೆಯಾಗಬೇಕು. ಇದು ಲಾಭದಾಯಕ ಉದ್ದಿಮೆಯಾಗಬಾರದು. ಮಕ್ಕಳಿಗೆ ಎಟಕುವ ದರದಲ್ಲಿ ಗುಣಮಟ್ಟದ ಶಿಕ್ಷಣ ಕೊಡುವ ಮೂಲಕ ಅವರನ್ನು ರಾಷ್ಟ್ರಕ್ಕೆ ಆಸ್ತಿಯನ್ನಾಗಿಸಬೇಕು. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಜ್ಞಾನವನ್ನು ಕೊಡುವಂತಹ, ಅವರ 360ಡಿಗ್ರಿ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಮೌಲ್ಯ ಆಧಾರಿತ ಶಿಕ್ಷಣ ನೀಡಬೇಕು ಎಂಬುದು ಡಾ. ಕೃಷ್ಣರವರ ನಿಲುವು.



### ಡಾ. ಎನ್.ಎಸ್. ಸತೀಶ್

ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲರಾದ ಇವರು 2024–25ನೇ ಸಾಲಿನ ಬೆಂಗಳೂರು ನಗರ ವಿಶ್ವವಿದ್ಯಾಲಯದ ಪಠ್ಯಪುಸ್ತಕ ರಚನಾ ಸಮಿತಿ (BOS) ಹಾಗೂ ಪರೀಕ್ಷಾ ಮಂಡಳಿ (BOE) ತಜ್ಞ ಸದಸ್ಯರಾಗಿ ನೇಮಕಗೊಂಡಿದ್ದಾರೆ.



### ಕೆ. ವೀರಪ್ಪ

ಶೇಷಾದ್ರಿಪುರಂ ಎಜುಕೇಷನಲ್ ಅಸೋಸಿಯೇಷನ್‌ನ ಇಂಜಿನಿಯರ್ ಆದ ಕೆ. ವೀರಪ್ಪ ಅವರು ಕರ್ನಾಟಕ ಕ್ಯಾನ್ಸರ್ ಸೊಸೈಟಿ(ರಿ) ಸಂಸ್ಥೆಗೆ 2024–27ನೇ ಸಾಲಿಗೆ ಜಂಟಿ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## Rajyapuraskar 2025




**Sanjith** and **Suhas** from the Postgraduate Department, Seshadripuram College qualified for the State-Level Rajyapuraskar Testing Camp held from 14th to 17th Nov. 2024. Representing the Rangers and Rovers Unit, they successfully completed the camp and were conferred the prestigious Rajyapuraskar Award 2025 by the Hon'ble Governor of Karnataka, Thawar Chand Gehlot, on 17th March 2025.



### Assoc. Prof. Bharath P.N.

from SICM, has been nominated as a member of the Board of Studies (BOS) for the BCA English textbook under the State Education Policy (SEP). He has also contributed as a member of the Board of Examiners.



### Rashmi B.

Faculty from Seshadripuram Law College has secured First Rank in the Master of Arts (Sociology) degree examination from Kuvempu University (Distance Education).



**Varshitha D.** (2023-24) from Seshadripuram Degree College, Mysuru has bagged 02 Gold Medals in BCA(96%) topper in Bachelor of Computer Applications. She has bagged the below mentioned 02 Gold Medals at the 105th Annual Convocation of 2023-24.

1) Maharaja Education Trust Mysore Gold Medal.
2) Prof. G. Hemantha Kumar Endowment Gold Medal.

## ಶೇಷಾದ್ರಿಪುರಂ ಕಾಲೇಜಿನಲ್ಲಿ ಖಾದ್ರಿ ಶಾಮಣ್ಣ ಕನ್ನಡ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ



**ಶೇಷಾದ್ರಿಪುರಂ,** ಶೇಷಾದ್ರಿಪುರಂ, ಜೂ. 14 – ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಖಾದ್ರಿ ಶಾಮಣ್ಣ ಕನ್ನಡ ಪತ್ರಿಕೋದ್ಯಮ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ ಅವರಿಗೆ ಪ್ರದಾನ ಮಾಡಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಇವರು 1978ರಲ್ಲಿ ತುರ್ತು ಪರಿಸ್ಥಿತಿ ವಿರುದ್ಧ ಕರ್ನಾಟಕದಲ್ಲಿ ಸಿಡಿದೆದ್ದ ಪತ್ರಕರ್ತರಲ್ಲಿ ಖಾದ್ರಿ ಶಾಮಣ್ಣ ಪ್ರಮುಖರು. ಪತ್ರಿಕೋದ್ಯಮ ಪ್ರಭಾವಶಾಲಿಯಾದ ಕ್ಷೇತ್ರ. ಸಮಾಜದ ಸಮಸ್ಯೆಗಳಿಗೆ ಸ್ಪಂದಿಸಿ ಅದರ ನಿವಾರಣೆಗೆ ಶ್ರಮಿಸುವುದು ಹಾಗೂ ಜನರಲ್ಲಿ ಜಾಗೃತಿ ಹಾಗೂ ಅಂತಿಮ ಸ್ವರೂಪ ಮೂಡಿಸುವಲ್ಲಿ ಈ ಕ್ಷೇತ್ರ ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ಶೇಷಾದ್ರಿಪುರಂ ಸಮೂಹ ಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಅವರು ಮಾತನಾಡಿ ಇಂದು ಮುಖ್ಯ ವಾಹಿನಿ ಪತ್ರಿಕೋದ್ಯಮ ತನ್ನ ಪಾವಿತ್ರ್ಯ ಉಳಿಸಿಕೊಂಡಿದೆ ಎಂದರೆ ನಿಮ್ಮಂತಹ ಹಿರಿಯ ಪತ್ರಕರ್ತರಿಂದ ಮಾತ್ರ. ಶಾಮಣ್ಣರವರು ಗಾಂಧಿಯವರಂತೆ ಸರಳ ಜೀವನವನ್ನು ಅಪ್ಪಿಕೊಂಡು ಬದುಕಿದವರು. ಸ್ವಾತಂತ್ರ್ಯ ಸಂಗ್ರಾಮ ಹೋರಾಟದಲ್ಲಿ ಧುಮುಕಿ ಶ್ರಮಿಸಿದವರು.

ಖಾದ್ರಿ ಶಾಮಣ್ಣ ಟ್ರಸ್ಟ್‌ನ್ನು ರಾಮಕೃಷ್ಣ ಹೆಗಡೆಯವರು ಪ್ರಾರಂಭ ಮಾಡಲು ಸಲಹೆ ನೀಡಿದರು. ಶಾಮಣ್ಣ ಅವರ ಹೆಸರಿನಲ್ಲಿ ಪ್ರಶಸ್ತಿ ಕೊಡಬೇಕು ಎಂದು ಅವರು ತಿಳಿಸಿದ್ದರು. ಅಂದಿನಿಂದ ಇಂದಿನವರೆಗೂ 32 ವಾರ್ಷಿಕ ಪ್ರಶಸ್ತಿ ಕೊಟ್ಟಿದ್ದೇವೆ. ಇದು ಪತ್ರಕರ್ತರ ಜೀವಮಾನದ ಪ್ರಶಸ್ತಿ. ಈ ಕೆಲಸ ಅವಿರತವಾಗಿ ಸಾಗುತ್ತಿದೆ ಎಂದು ಹಿರಿಯ ಪತ್ರಕರ್ತ ಶ್ರೀಶ ತಿಳಿಸಿದರು.

ಪ್ರಶಸ್ತಿ ಪುರಸ್ಕೃತರು ಕೂಡ್ಲಿ ಗುರುರಾಜ ಅವರು ಮಾತನಾಡಿ ತಾವು ನಡೆದುಬಂದ ದಾರಿ, ಹಿರಿಯ ಪತ್ರಕರ್ತರಿಂದ ಸಿಕ್ಕ ಮಾರ್ಗದರ್ಶನಗಳನ್ನು ತಿಳಿಸಿ ಮಾತನಾಡಿದರು.

ಪತ್ರಿಕೋದ್ಯಮದ ಪ್ರೊಫೆಸರ್ ಕೆ.ವಿ. ನಾಗರಾಜು ಹಾಗು ಜಾನಪದ ತಜ್ಞ ಮೀರಾಸಾಬಿಹಳ್ಳಿ ಶಿವಣ್ಣ ಭಾಗವಹಿಸಿದ್ದು ಮಾತನಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

"ಪ್ರತಿಯೊಬ್ಬ ವ್ಯಕ್ತಿಯು ಎರಡು ರೀತಿಯ ಶಿಕ್ಷಣ ಹೊಂದುತ್ತಾನೆ. ಒಂದು ಇತರರು ಅವನಿಗೆ ನೀಡುವುದು. ಇನ್ನೊಂದು ಅವನು ಸ್ವಂತ ಕಲಿಯುವುದು". – ಮಹಾತ್ಮ ಗಾಂಧೀಜಿ

# Achievements

## National Service Scheme State Awardees - 2022-23



Yelahanka, The NSS Unit of Seshadripuram First Grade College, Yelahanka has been honored with the "Best NSS Unit Award" for the academic year 2022–23 by the Government of Karnataka, in recognition of its exceptional contribution to community service and social development and Prof. Naveen Kumar K.S., NSS Programme Officer of the college, received the "Best NSS Programme Officer Award" for his exemplary leadership and dedication in guiding and inspiring student volunteers to engage in impactful service-oriented initiatives. The awards were presented by His Excellency, the Governor of Karnataka, Shri Tawar Chand Gehlot, during a formal function held at Raj Bhavan, Bengaluru, on 17th March 2025.



**Vishal S.** NSS volunteer from Seshadripuram First Grade College, Yelahanka, was conferred with the "Best NSS Volunteer Award" in recognition of his exemplary involvement in community development initiatives and unwavering dedication to the values and objectives of the National Service Scheme.



**Varsha K C** from Seshadripuram College, Seshadripuram, has been awarded the 2022–23 State NSS Award for Best Volunteer (Girls) in recognition of her outstanding selfless service.



**Latha Singh** from Seshadripuram Degree College, Mysuru, has been awarded the 2022–23 State NSS Award for Best Volunteer (Girls) in recognition of her outstanding selfless service.



Olympiad Examination 2024-25 - Seshadripuram, Seshadripuram English High School, In IMO 4 students achieved Gold Medals of Distinction, in NSO 72 Gold Medals of Excellence, and in IMO 85 Gold Medals of Excellence and Certificates of participation were awarded to the students.







**Seshadripuram First Grade College** has been recognized with two prestigious certificates of excellence. The institution received the Gold category award in the Sustainable Institutions of India-Green Rankings 2025 for its dedication to sustainable education practices. Additionally, it was ranked 42nd under Band AI in the STEM Education Rankings 2025 by Chronicles of India, highlighting its commitment to excellence in Science, Technology, Engineering, and Management education and its focus on innovation and future-ready competencies.



**Tanuja and Nisha T.N.** (CSE, II Sem), students of Seshadripuram Institute of Technology, won gold and silver medals respectively at the Mysuru City Inter-College Weightlifting Competition held at SJCE on March 25, 2025.



Students of Seshadripuram College emerged as winners at the Namma Sportika Inter-Collegiate Sports Meet organized by GITAM University, securing a cash prize of ₹10,000 for their outstanding performance.

## Environment Day Celebrations across Seshadripuram Group of Institutions



Seshadripuram Group of Institutions observed World Environment Day on 5th June with eco-conscious activities across all campuses under the theme Our Land. Our Future. In collaboration with the Bangalore District Amateur Cycling Association, Karnataka State NSS Cell, NCC Unit, and the Department of Physical Education, the central event featured Mr. Kishore, Cycling Coach at SAI, Bangalore, as Chief Guest, and was presided over by Nadoja Dr. Wooday P. Krishna, Honorary General Secretary. Across Seshadripuram Group of Institutions, the day was observed with several eco-conscious activities. From sapling plantations and student-led green initiatives, the events highlighted our collective commitment to protecting the planet. Each institution brought its unique touch to the theme - "Our Land-Our Future"

"The Earth is what we all have in common" – Wendell Berry

## Seshadripuram Independent PU College
Kengeri




## Seshadripuram Pre-University College
Yelahanka

### State Level Rank Holders




## Seshadripuram Pre-University College
Tumakuru




### Commerce Toppers 2024-25




### Science Toppers 2024-25




## Seshadripuram Independent PU College
Mysuru

### State Level Rank Holders




### CET Ranking




## Seshadripuram Evening P U College
Seshadripuram

### College Toppers 2024-25




"Cultivation of mind should be the ultimate aim of human existence" – Dr. B. R. Ambedkar

## Seshadripuram First Grade College
Yelahanka

### Rank Holders of Bengaluru City University B.Com (BDA) Examinations 2023-24




### BSc (BBG) Examinations 2023-24




## Seshadripuram College
Seshadripuram

### Rank Holders of Bengaluru City University




## Seshadripuram Institute of Commerce and Management
Seshadripuram

### Rank Holder of Bengaluru City University B.Com Examination 2023-24



K N VISHNU
B.COM - 7th RANK

## Seshadripuram College Post Graduate Department of Commerce
Seshadripuram

### Bangalore City University Exams Rank Holders

M.Com. Financial Analysis Program




M.Com. International Business Program




## Seshadripuram First Grade College Post Graduate Department of Commerce
Yelahanka

### M.Com (F&A) Rank holders of BCU Examination




## SET Academic Excellence - SSLC Toppers - 2023-24

*SET Congratulates All the Achievers*

## Seshadripuram English High School
Seshadripuram




## Seshadripuram Primary and High School
Yelahanka




## Seshadripuram Public School
Yelahanka




"ಶಿಕ್ಷಣವು ಮನುಷ್ಯನನ್ನು ಶ್ರೇಷ್ಠ ನಾಗರಿಕನನ್ನಾಗಿ ಮಾಡುತ್ತದೆ" – ಡಾ. ಎಸ್. ರಾಧಾಕೃಷ್ಣನ್

# Events

## Seshadripuram Degree College
Mysuru






On April 29, the college hosted the One-Day Multilingual National Conference – Avalokana 2025, organized in collaboration with the IQAC and the Departments of Kannada, English, and Hindi, alongside Abhijatha Kannada Peer-Reviewed Journal. The conference highlighted the role of multilingual literary expression in contemporary discourse. Prof. Kavitha Rai, Director, Akkamahadevi Studies Centre, KSOU, Mysuru, served as Chief Guest and spoke on the cultural depth of multilingual literature. The keynote by Dr. Venkatesh P., Professor of English, Maharaja College, Mysuru, critically explored the double-edged influence of Artificial Intelligence on literature and creativity. The day witnessed the presentation of 75 research papers in English, Kannada, and Hindi, chaired by eminent scholars including Dr. N. R. Chandregowda, Dr. T. K. Kempegowda, Mr. Gavin Jude Wilson, and Dr. Basavaraj K. Baraker.

Earlier, on April 4, the college conducted Anveshana 2025, a One-Day National Multi-Disciplinary Conference on the theme "Digital Transformations: Opportunities and Challenges". Jointly organized by the IQAC and the Research and Development Cell "Prayoga", the conference was chaired by Prof. Gangadhar, Vice-Chancellor, Chamarajanagar University. The keynote address by Dr. Sunil M. V., Assistant Professor, SDMIMD, Mysore, explored emerging challenges in digital ecosystems. "Nadoja" Dr. Wooday P. Krishna, Honorary General Secretary of Seshadripuram Educational Trust, presided over the session and emphasized the importance of research and innovation in higher education.

Adding a socially conscious dimension to its academic calendar, on May 8, the college observed World Red Cross Day by organizing a Free Health Check-up Camp in collaboration with the Youth Red Cross (YRC), Rotary Club Mysore Midtown, and Clearmedi. The camp offered retinal screening, auto-refraction, vision testing, GRBS checks, and more, benefiting over 85 students and parents. The initiative aimed to instill the values of social responsibility and service. It was graced by Dr. Sowmya Erappa K., Principal; Vinay M., YRC and Rotaract Coordinator; and faculty members.

Reflecting the institution's commitment to cultural and ethical education, on March 15, a special session on "The Ideas of Madara Channayya's Vachanas" was conducted in association with the Basava Study Centre and Sri Basaveshwara Social Reform Centre, University of Mysore. Delivered by Dr. Sivarajappa S., retired professor from the Oriental Research Institute, the lecture explored Channayya's egalitarian teachings. Noted speakers Prof. Aravinda Malagatti and Prof. Lolakshi contextualized the enduring relevance of Sharana philosophy in today's society.

## Seshadripuram First Grade College
Yelahanka






The NSS Unit organized its Annual Special Camp–2025 from March 21 to 27 at S.S. Ghatti Village, Doddaballapur Taluk. Activities such as cleanliness drives, health awareness campaigns, tree plantations, self-defense workshops, leadership sessions, and cultural exchange programs. To promote professional awareness, the college organized an IEEE Awareness Program and Membership Drive for students of B.Sc (EMC), BCA, and MCA. The event was inaugurated by Dr. B.K. Das, distinguished Scientist and Director General-ECS, and featured distinguished guests including Dr.Venugopal K.R., IEEE Fellow and former Vice-Chancellor; Dr. Chengappa, Senior IEEE Leader; and Nadoja Dr. Wooday P. Krishna, Hon. General Secretary, Seshadripuram Educational Trust.

ADVITEEYA 2025, the inter-collegiate fest, was hosted on 16th May 2025. Sri W. D. Ashok presided over the event, with RJ Vikki and Mr. Raghavendra B. S. as the Chief Guest and Guest of Honour respectively. The college Annual Day was celebrated on 28th May 2025. Dr. S.N. Omkar, Chief Research Scientist at IISc, was the Chief Guest, with Nadoja Dr. Wooday P. Krishna as Guest of Honour. Principal Dr. S.N. Venkatesh presented the Annual Report and felicitated meritorious students.

## Seshadripuram College
Seshadripuram






The Annual Day Celebrations held on 13 May, organized by the Tarang Cultural Committee, was graced by Chief Guest Mr. Pradeep Doddaiah and Guest of Honour Sri M.S. Nataraj, along with faculty and staff. Two impactful workshops were conducted to enhance research and career preparedness among students and faculty.

On 5 May, the Centre for Professional Development hosted a session titled "Enhancing Research Proposal Development, Synopsis, Data Analytics and Report Writing Skills using AI-Powered Tools", providing participants with cutting-edge research tools and techniques. On 26 April, the Centre for Career Development, in association with the Seshadripuram College Old Students' Association (SCOSA), organized "Ace the Talk: GD & PI Secrets Unlocked", a dynamic session aimed at helping students excel in group discussions and personal interviews. The Annual Athletic Meet 2024–25 was held on 29 April which promoted sportsmanship.

"All labour that uplifts humanity has dignity and importance" – Martin Luther King Jr.

## Seshadripuram Law College

### Seshadripuram










Seshadripuram Law College marked the quarter with a series of enriching academic and community-focused initiatives, reinforcing its commitment to legal education, civic awareness, and social responsibility.

On April 24, in association with the Grievance Cell, the college hosted a Guest Lecture on "Establishment and Functioning of the Information Commission in India." Ms. Sussane George Raju, Guest Faculty at Ramaiah Law College, Bengaluru, elaborated on the structure, powers, and relevance of Central and State Information Commissions under the RTI Act, 2005.

This was followed by another Guest Lecture on April 26, organized in collaboration with the Environment Club, focusing on "Navigating Coastal Boundaries: The Legal and Environmental Dimensions of the CRZ Notifications 2019." Smt. P. Vaishnavi Narayani, Assistant Professor, Ramaiah College of Law, explored the evolution of Coastal Regulation Zone (CRZ) policies, comparing the 2011 and 2019 notifications, and addressing the challenges of balancing development with environmental protection.

Earlier, on April 5, the college organized a Workshop on "Mediation in the Present ADR System," aimed at promoting awareness of Alternative Dispute Resolution (ADR) mechanisms. The session was inaugurated by Hon'ble Justice Nataraj R. Additionally, from April 9 to 15, the college held its NSS Special Annual Camp at Kuduvathi Village, Chikkaballapura District. Inaugurated by Sri K. Nagaraj, President, MPCS, and dignitaries from Kuppali Grama Panchayat.

## Seshadripuram Evening College

### Seshadripuram




Seshadripuram Evening College continued to build its academic stature by hosting two significant international academic events that showcased its commitment to innovation in teaching and research.

On April 24, the Department of English, in association with the IQAC and BCU POET, organized an International Webinar on "AI and the Future of English Language Teaching." The session was inaugurated by Prof. N.S. Satish, Principal, SEC, and the keynote address was delivered by Nadoja Dr. Wooday P. Krishna, Honorary General Secretary, Seshadripuram Educational Trust. Renowned international expert Prof. Agnes Kukulska Hulme (UK) addressed "AI-oriented competencies for English language learning", while Dr. Krishna Kalyan Dixit (Delhi) explored "Developing Learnacy in Language Learning and AI." The session was graced by P.C. Narayana, Chairman, Governing Council; Dr. Thandava Gowda T.N., Chairperson, BoS (English), BCU; and Dr. Prasanna Udipikar, Principal, VVN Degree College and President of BCU POET, who presided over the webinar.

Further reinforcing faculty development, the college hosted a 7-Day International Virtual Faculty Development Program (FDP) on "Nurturing Futuristic Academic Excellence: Enhancing Abilities in Data Analysis, Literature Review & Research Design," in collaboration with the Research Learning Circle, a Kharagpur-based academic platform for researchers. The inaugural session featured Dr. K. Vikram, Nodal Officer, State Quality Assurance Cell, DCE, Govt. of Karnataka, and Nadoja Dr. Wooday P. Krishna, who underscored the importance of interdisciplinary and ethical research practices.

## Seshadripuram Institute of Commerce and Management

### Seshadripuram







The college hosted several notable events that showcased student talent and institutional vibrancy. The Annual Athletic Meet was held on 21st March at Bangalore University Grounds, inaugurated by Defence Pilot Ms. Jyothi Gowda D. R., with Prof. K. P. Narasimha Murthy, Chairman of the Governing Council, as Guest of Honour and Nadoja Dr. Wooday P. Krishna presiding.

On 28th and 29th April, PURVI – the Forum for Cultural and Performing Arts – organized Samsrushti'25, a two-day intercollegiate fest featuring cultural, management, literary, e-sports, and sports competitions with participation from nearly 30 colleges. The valedictory was graced by the film crew of Seat Edge, including Siddu Moolimani, Raviksha Shetty, Raghu Raamanakoppa, Chethan Shetty, and Giridhara T. Vasanthapura.

The 18th College Annual Day was celebrated on 14th May at the main campus with 28 vibrant student performances including dance, fashion show, and singing. Chief Guest for the occasion was noted Kannada writer and comedian M. S. Narasimha Murthy, while FCA Pavan Kumar S., Chartered Accountant and SICM alumnus, served as Guest of Honour.

On 24th May, the Annual Prize Distribution Day was held to recognize academic and co-curricular achievements, graced by Chief Guests Prof. Madhura D. of Nagarjuna Degree College and Sudhir V. Bainaik of SFGC, Yelahanka, along with Chief of Honour W. D. Ashok, Trustee, SET, and Principal Prof. Vidya Shivannavar.

The 15th Annual K.M. Nanjappa Memorial Inter-Collegiate Cricket Tournament, conducted from 13th to 17th May which saw participation from 12 teams, with Surana College winning first place, Reva University second, and Seshadripuram Educational Trust securing third. The event was inaugurated by Dr. Kumaraswamy and attended by dignitaries C. Prashanth Kumar and W. D. Ashok, with a welcome address by Principal Prof. Vidya Shivannavar.

"ಪುಸ್ತಕ ಓದುವ ಹವ್ಯಾಸವಿರುವವನು ಎಲ್ಲಿ ಹೋದರೂ ಸುಖವಾಗಿರಬಲ್ಲ" – ಮಹಾತ್ಮ ಗಾಂಧೀಜಿ

## ಸಿನೆಮಾ ಮನೋವಿಕಾಸಕ್ಕೆ ಅನುವು ಮಾಡಿಕೊಡುತ್ತದೆ – ಗಿರೀಶ್ ಕಾಸರವಳ್ಳಿ



**ಯಲಹಂಕ,** ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಮೇ 20 – ಕಾಲೇಜಿನ ಐಕ್ಯುಎಸಿ ಘಟಕ, ಕನ್ನಡ ಸಂಘ ಹಾಗೂ ಗ್ರಂಥಾಲಯ ವಿಭಾಗದ ವತಿಯಿಂದ 'ಸಾಹಿತ್ಯ ಮತ್ತು ಸಿನೆಮಾ' ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಗಿರೀಶ್ ಕಾಸರವಳ್ಳಿ ಆಗಮಿಸಿದ್ದು, ಕನ್ನಡ ವಿಭಾಗದಿಂದ ಹೊರತಂದ 'ಕನ್ನಡ ದೀವಿಗೆ' ಪತ್ರಿಕೆಯನ್ನು ಬಿಡುಗಡೆ ಮಾಡಿ, ಮಾತನಾಡುತ್ತಾ, "ಸಿನೆಮಾ ಮನರಂಜನೆಯಲ್ಲ, ಅದು ಮನೋವಿಕಾಸಕ್ಕೆ ಅನುವು ಮಾಡಿಕೊಡುತ್ತದೆ. ಸಿನಿಮಾದ ಉದ್ದೇಶ ನಮ್ಮ ಅರಿವನ್ನು ಹೆಚ್ಚಿಸುತ್ತಲೇ ಧ್ವನಿ ಇಲ್ಲದವರಿಗೆ ಧ್ವನಿಯಾಗಿ, ಬಡತನದಲ್ಲೂ ಇರಬಹುದಾದ ಸಣ್ಣ ಸಣ್ಣ ಆಸೆ, ಉತ್ಸಾಹ ಹಾಗೂ ಜೀವನ ಪ್ರೀತಿಯನ್ನು ತೋರಿಸುತ್ತದೆ. ಎಷ್ಟು ಸಿನೆಮಾ ಮಾಡಿದರು, ಎಷ್ಟು ಪುಸ್ತಕ ಬರೆದು ಜನಪ್ರಿಯರಾದರು ಎನ್ನುವುದಕ್ಕಿಂತ ಗುಣಾತ್ಮಕ ಸಾಹಿತ್ಯ, ಸಿನೆಮಾ ಮುಖ್ಯವಾಗುತ್ತದೆ. ಸಾಹಿತ್ಯ, ಓದಿದ ಮೇಲೆ ಅನುಭವಕ್ಕೆ ದಕ್ಕಿದರೆ, ಸಿನೆಮಾ ಮೊದಲು ಅನುಭವವಾಗಿ ಆನಂತರ ವಿಚಾರಕ್ಕೆ ತೊಡಗುವಂತೆ ಮಾಡುತ್ತದೆ. ಸಾಹಿತ್ಯ ಸುತ್ತಲಿರುವ ಅಪರಿಚಿತ ಪ್ರಪಂಚವನ್ನು ಗುತ್ತಿಯ ಮೂಲಕ, ಸಾಕವ್ವನಂಥವಳ ಮೂಲಕ ಕಾಣಿಸುವ ಕೆಲಸ ಮಾಡುತ್ತದೆ" ಎಂದರು. ವಿಜೇತರಿಗೆ ಪುಸ್ತಕ ಬಹುಮಾನವನ್ನು ಪ್ರಾಯೋಜಿಸಿದ ನ. ರವಿಕುಮಾರ ಅವರು ಅತಿಥಿಯಾಗಿ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ವಹಿಸಿದ್ದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು, "ನಾನು ಸುಮಾರು 50 ವರ್ಷಗಳಿಂದಲೂ ಕಾಸರವಳ್ಳಿಯವರ ಸಿನೆಮಾಗಳ ಅಭಿಮಾನಿ, ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ವಿದ್ಯಾರ್ಥಿಗಳಿಗೆ ತಲುಪಬೇಕು. ಹೆಚ್ಚು ಮಾನವೀಯತೆಯ ಕಡೆಗೆ ವಿದ್ಯಾರ್ಥಿಗಳು ತುಡಿಯುವಂತಾಗಬೇಕು" ಎಂದು ಕಾರ್ಯಕ್ರಮದ ಆಯೋಜನೆಯನ್ನು ಶ್ಲಾಘಿಸಿದರು. ಕಾಲೇಜಿನ ಪ್ರಾಂಶುಪಾಲರು ಡಾ. ಎಸ್.ಎನ್. ವೆಂಕಟೇಶ್ ಹಾಗೂ ಉಪನ್ಯಾಸಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಬಹುಮಾನ ವಿತರಣಾ ಸಮಾರಂಭ




**ಕೆಂಗೇರಿ,** ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್, ಮೇ 28 – ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ 19ನೇ ಕ್ರೀಡಾ ದಿನಾಚರಣೆಯ ಬಹುಮಾನ ವಿತರಣಾ ಸಮಾರಂಭದಲ್ಲಿ ಭಾರತೀಯ ಪವರ್ ಲಿಫ್ಟರ್ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವಿಶ್ವನಾಥ್ ಬಿ., ಆಗಮಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ರಾಷ್ಟ್ರೀಯ ವಾಲಿಬಾಲ್‌ಪಟು ಸೂರಜ್ ಬಿ. ನಾಯಕ್ ಹಾಗೂ ಗಾಯಕರಾದ ವಾಸುಕಿ ವೈಭವ್ ಹಾಜರಿದ್ದು ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಹುರಿದುಂಬಿಸಿದರು. ಸಮಾರಂಭದಲ್ಲಿ ಕಾಲೇಜಿನ ಪ್ರಾಂಶುಪಾಲರು ಡಾ. ಜಯರಾಮು, ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು ಡಾ. ಮಂಜುನಾಥ್ ಉಪಸ್ಥಿತರಿದ್ದರು.

## ಬಾನು ಮುಷ್ತಾಕ್‌ರಿಗೆ ಸಂದ ಗೌರವ ಕನ್ನಡ ಸಾಹಿತ್ಯಕ್ಕೆ ಸಂದ ಗೌರವ – ಹಂಪನಾ




**ಶೇಷಾದ್ರಿಪುರಂ,** ಶೇಷಾದ್ರಿಪುರಂ ಶಿಕ್ಷಣ ದತ್ತಿ, ಮೇ 24 – ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಶೇಷಾದ್ರಿಪುರಂ ಸಂಜೆ ಕಾಲೇಜು ಮತ್ತು ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ ಇವರ ಸಂಯುಕ್ತಾಶ್ರಯದಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣ ನಡೆಯಿತು. ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ವಿದ್ವಾಂಸರು, ನಾಡೋಜ ಹಂಪ ನಾಗರಾಜಯ್ಯ ಅವರು "ಬಾನು ಮುಷ್ತಾಕ್ ಅವರಿಗೆ ಸಂದ ಗೌರವ ಕನ್ನಡ ಸಾಹಿತ್ಯಕ್ಕೆ ಸಂದ ಗೌರವ" ಎಂದು ಸ್ಮರಿಸಿದರು.

ಹಿರಿಯ ವಿಮರ್ಶಕರಾದ ಡಾ. ಎಂ.ಎಸ್. ಆಶಾದೇವಿ ಅವರು ಆಶಯ ನುಡಿಯನ್ನಾಡುತ್ತ "ವಿಮರ್ಶೆ ಹದಗೊಳ್ಳುವುದು ಚಿನ್ನಾಟದ ಕೆಲಸವಲ್ಲ" ಎಂದು ಬೇಂದ್ರೆಯವರ ಮಾತನ್ನು ಸ್ಮರಿಸಿದರು. "ವಿಮರ್ಶೆಗೆ ಬೇಕಾಗಿರುವುದು ಆರೋಗ್ಯಕರವಾದ ಮುಕ್ತ ಮನಸ್ಸು" ಎಂದು ತಿಳಿಸಿದರು. ವಿಚಾರ ಸಂಕಿರಣಕ್ಕೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಮಾತನಾಡಿ ಎರಡು ಸಂಸ್ಥೆಗಳು ಸೇರಿ ಆಯೋಜಿಸಿರುವ ಈ ವಿಚಾರ ಸಂಕಿರಣ ಸಂಶೋಧನಾ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತದೆ ಎಂದು ತಿಳಿಸಿದರು. "ನಾನು ವಿಮರ್ಶಕನಲ್ಲ ನಾನು ಸಾಹಿತ್ಯ ಪ್ರೇಮಿ" ಎಂದು ಮಾತನಾಡಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಮುಕುಂದರಾಜು ಅವರು ಮಾತನಾಡಿ "ವಿಮರ್ಶೆ ಎನ್ನುವುದು ಬಹಳ ಕಷ್ಟದ ಕೆಲಸ. ವಿಮರ್ಶಾಕಾರರು ತಮ್ಮ ಸೃಜನಶೀಲತೆಯನ್ನು ಬದಿಗೊತ್ತಿ ವಿಮರ್ಶಾ ಪ್ರಜ್ಞೆ ಮೈಗೂಡಿಸಿಕೊಳ್ಳಬೇಕು" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಜೆ ಕಾಲೇಜಿನ ಪ್ರಾಂಶುಪಾಲರು ಡಾ. ಎನ್.ಎಸ್. ಸತೀಶ್, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಡಾ. ಎಸ್.ಎನ್. ವೆಂಕಟೇಶ್ ಹಾಗೂ ಎಲ್ಲಾ ಕನ್ನಡ ವಿಭಾಗದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇಲ್ಲಿ ಅಧ್ಯಯನಾಧಾರಿತ ಮೂರು ಗೋಷ್ಠಿಗಳನ್ನು ನಡೆಸಲಾಯಿತು. ಡಾಕ್ಟರ್ ತಾರಿಣಿ ಶುಭದಾಯಿನಿ, ಡಾ. ಎ. ರಘುರಾಮ್, ಡಾ. ಧನಂಜಯಕುಂಬ್ಳೆ ವಿಚಾರಗಳನ್ನು ಕುರಿತು ಪ್ರಬಂಧ ಮಂಡಿಸಿದರು. ಸಮಾರೋಪ ಸಮಾರಂಭದಲ್ಲಿ ಬೆಂಗಳೂರಿನ ಪೂರ್ಣಚಂದ್ರ ತೇಜಸ್ವಿ ಕನ್ನಡ ಸಾಂಸ್ಕೃತಿಕ ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಕೆ.ಸಿ. ಶಿವಾರೆಡ್ಡಿ ಅವರು ಕನ್ನಡ ಸಾಹಿತ್ಯ ವಿಮರ್ಶೆಯನ್ನು ಕುರಿತು ನವೀಕರಿಸುತ್ತಿರುವ ವಿಮರ್ಶಾ ಪದ್ಧತಿಗಳ ಪ್ರಾಮುಖ್ಯತೆಯ ಬಗ್ಗೆ ಬೆಳಕು ಚೆಲ್ಲಿದರು.

## ಡಾ. ಸಿಸಿರಾ ಯುವ ಸಾಹಿತ್ಯ ಪ್ರಶಸ್ತಿ



2025ನೇ ಸಾಲಿನ ಡಾ. ಸಿಸಿರಾ ಯುವ ಸಾಹಿತ್ಯ ಪ್ರಶಸ್ತಿಯನ್ನು ತುಮಕೂರಿನ ಶೇಷಾದ್ರಿಪುರಂ ಕಾಲೇಜಿನ ಕನ್ನಡ ವಿಭಾಗದ ಅಧ್ಯಾಪಕರಾದ ದುಗ್ಗೇನಹಳ್ಳಿ ಸಿದ್ದೇಶರವರಿಗೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವಿದ್ವಾಂಸರಾದ ಡಾ. ಹಂಪ ನಾಗರಾಜಯ್ಯ, ಶಾಸ್ತ್ರ ಚೂಡಾಮಣಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ನಾಡೋಜ ಡಾ. ವೂಡೇ ಪಿ. ಕೃಷ್ಣರವರು ನೀಡಿ ಗೌರವಿಸಿದರು.

"Technology is best when it brings people together" – Matt Mullenweg

## 2047ಕ್ಕೆ ಇಸ್ರೋದ ಬಾಹ್ಯಾಕಾಶ ನಿಲ್ದಾಣ – ಪದ್ಮಶ್ರೀ ಎ.ಎಸ್. ಕಿರಣ್ ಕುಮಾರ್



**ಮೈಸೂರು,** ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಏ. 16 – ಇಸ್ರೋದ ಮಾಜಿ ಅಧ್ಯಕ್ಷರು ಹಾಗೂ ಬಾಹ್ಯಾಕಾಶ ಸಮಿತಿ ಸದಸ್ಯರೂ, ಬಾಹ್ಯಾಕಾಶ ವಿಜ್ಞಾನಿ, ಪದ್ಮಶ್ರೀ ಡಾ. ಎ.ಎಸ್. ಕಿರಣ್ ಕುಮಾರ್ ಅವರು ಮೈಸೂರಿನ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿರುವ ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಆಯೋಜಿಸಿದ್ದ ವಿಚಾರಸಂಕಿರಣ ದಲ್ಲಿ ಭಾಗವಹಿಸಿ ಬಾಹ್ಯಾಕಾಶ ತಂತ್ರಜ್ಞಾನ ಕುರಿತಾಗಿ ಇಂಜಿನಿಯರಿಂಗ್ ವಿದ್ಯಾರ್ಥಿಗಳೊಂದಿಗೆ ಚಂದ್ರಯಾನ, ಮಂಗಳಯಾನದ ಬಗ್ಗೆ ಮಾಹಿತಿ ನೀಡಿದರು. ಸಂವಹನವು ಸರಳಗೊಂಡ ಬಗೆಯನ್ನು ವಿವರಿಸಿದರು. ಬೇರೆ ದೇಶಗಳು 1950ರ ದಶಕದಲ್ಲೇ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ್ದಂತ ಸಮಯದಲ್ಲಿ ಭಾರತದ ಸಾಧನೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಶೂನ್ಯವಾಗಿತ್ತು. ವಿಕ್ರಂ ಸಾರಾಭಾಯಿ ಮುಂತಾದ ಶ್ರೇಷ್ಠ ವಿಜ್ಞಾನಿಗಳು ಛಲಬಿಡದೆ ಇಂದು ಬಾಹ್ಯಾಕಾಶ ಕ್ಷೇತ್ರದಲ್ಲಿ ಅತೀ ದೊಡ್ಡ ಸಾಧನೆ ಮಾಡುವಂತೆ ಇಸ್ರೋವನ್ನು ಕಟ್ಟಿಬೆಳೆಸಿದರು. ಇಂದು ಯಾವುದೇ ದೇಶಮಾಡದ ಅನೇಕ ಸಾಧನೆಗಳನ್ನು ಇಸ್ರೋ ಮಾಡಿದೆ. 2047ಕ್ಕೆ ಸ್ವಂತ ಬಾಹ್ಯಾಕಾಶ ನಿಲ್ದಾಣವನ್ನು ಭಾರತವು ಹೊಂದಲಿದೆ ಎಂದು ತಿಳಿಸಿದರು.

ನಾಡೋಜ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷೀಯ ಭಾಷಣದಲ್ಲಿ ತಂತ್ರಜ್ಞಾನ ಬದಲಾವಣೆಗೆ ನಾವೆಲ್ಲ ಸಾಕ್ಷಿಯಾಗುತ್ತಿರುವುದನ್ನು ತಿಳಿಸಿ ಪ್ರತಿ ವಿದ್ಯಾರ್ಥಿಯೂ ಜ್ಞಾನದೊಂದಿಗೆ ಕೌಶಲ್ಯ ಹೊಂದುವುದು ಅಗತ್ಯ ಎಂದರು. ದತ್ತಿಯ ಸಹಾಯಕ ಕಾರ್ಯದರ್ಶಿಗಳಾದ ಎಂ.ಎಸ್. ನಟರಾಜ್, ಕಾಲೇಜಿನ ಪ್ರಾಂಶುಪಾಲರು ಡಾ. ಪ್ರಹ್ಲಾದ್ ರಾವ್ ಉಪಸ್ಥಿತರಿದ್ದರು.

## ಶಾಲಾ ಪ್ರಾರಂಭೋತ್ಸವ



**ಶೇಷಾದ್ರಿಪುರಂ,** ಶೇಷಾದ್ರಿಪುರಂ ಸ್ತ್ರೀಸಮಾಜ ಮಾಧ್ಯಮಿಕ ಶಾಲೆ, ಮೇ. 30 – ಶಾಲೆಯು ಪ್ರಸಕ್ತ ವರ್ಷದ ತರಗತಿಗಳನ್ನು ಆರಂಭಿಸಿತು. ಶಾಲೆಯನ್ನು ತಳಿರು ತೋರಣ, ಹೂ ಮತ್ತು ರಂಗೋಲಿಯಿಂದ ಸಿಂಗರಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಶಾಲೆಯ ಹಳೆಯ ವಿದ್ಯಾರ್ಥಿಯಾದ ಸುನಿಲ್ ಕುಮಾರ್, ಆಡಿಟರ್ ಅವರು ಆಗಮಿಸಿದ್ದರು. ಅವರು ಮಕ್ಕಳು ಕಲಿಕೆಯಲ್ಲಿ ಆಸಕ್ತಿ ವಹಿಸುವಂತೆ ಪ್ರತಿದಿನ ತಪ್ಪದೇ ಶಾಲೆಗೆ ಬರುವಂತೆ ಮಕ್ಕಳಿಗೆ ಪ್ರೋತ್ಸಾಹದಾಯಕ ಮಾತುಗಳನ್ನು ನುಡಿದರು. ನಂತರ ಮಕ್ಕಳಿಗೆ ಸಿಹಿಯನ್ನು ನೀಡಿ ಸ್ವಾಗತಿಸಲಾಯಿತು.

## ಕೆ.ಎಂ. ನಂಜಪ್ಪ ಸ್ಮರಣಾರ್ಥ ರಕ್ತದಾನ ಶಿಬಿರ



**ತುಮಕೂರು,** ಶೇಷಾದ್ರಿಪುರಂ ಕಾಲೇಜು – ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಸಹಯೋಗದೊಂದಿಗೆ ಕೆ.ಎಂ. ನಂಜಪ್ಪ ಸ್ಮರಣಾರ್ಥ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟಕರಾಗಿ ಪ್ರಜಾಪ್ರಗತಿ ಪತ್ರಿಕೆಯ ಸಂಪಾದಕರಾದ ಎಸ್. ನಾಗಣ್ಣನವರು ಆಗಮಿಸಿ ಮಾತನಾಡಿ ವಿದ್ಯಾರ್ಥಿಗಳು ನೈತಿಕ ಮೌಲ್ಯಗಳನ್ನು ಬೆಳಸಿಕೊಳ್ಳಿ ಎಂದು ಸಲಹೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ನಾಡೋಜ ಡಾ. ವೂಡೇ ಪಿ. ಕೃಷ್ಣರವರು ಮಾತನಾಡಿ ದೇಶಕ್ಕೆ ಏನಾದರೂ ಕೊಡುಗೆ ಕೊಡುವ ಪ್ರವೃತ್ತಿ ಬೆಳಸಿಕೊಂಡರೆ ನಾವು ಎತ್ತರಕ್ಕೆ ಬೆಳೆಯುತ್ತೇವೆ. ಠಾಗೂರರು ಹೇಳುವಂತೆ ಹೃದಯ ಸದಾ ಒಳಿತನ್ನು ಕೊಡುವಂತಾಗಬೇಕು ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ರೆಡ್ ಕ್ರಾಸ್ ಸೊಸೈಟಿಯ ಸಂಚಾಲಕರಾದ ಡಾ. ರಾಜು ಚಂದ್ರಶೇಖರ್, ಕಾಲೇಜಿನ ಪ್ರಾಂಶುಪಾಲರು ಭಾಗವಹಿಸಿದ್ದರು.

## ಶಿಕ್ಷಣದಷ್ಟೇ ಮಹತ್ವ ಕ್ರೀಡೆಗೂ ಇದೆ – ಡಾ. ಜಿ. ಪರಮೇಶ್ವರ್




**ತುಮಕೂರು,** ಶೇಷಾದ್ರಿಪುರಂ ಕಾಲೇಜು – ಇಲ್ಲಿನ ಮಹಾತ್ಮ ಗಾಂಧಿ ಸ್ಟೇಡಿಯಂನಲ್ಲಿ ವಾರ್ಷಿಕ ಕ್ರೀಡಾಕೂಟ ನಡೆಯಿತು. ಮಾನ್ಯ ಗೃಹಮಂತ್ರಿಗಳಾದ ಡಾ. ಜಿ. ಪರಮೇಶ್ವರ ಅವರು ವಿದ್ಯಾರ್ಥಿಗಳಿಗೆ ಶಿಕ್ಷಣ ಎಷ್ಟು ಮುಖ್ಯವೋ, ಕ್ರೀಡೆ ಅಷ್ಟೇ ಮುಖ್ಯ. ಸದೃಢ ಸಮಾಜಕ್ಕೆ ಆರೋಗ್ಯವಂತ ಯುವಶಕ್ತಿ ಅವಶ್ಯಕ. ನೀವು ಶಿಕ್ಷಣವನ್ನೂ ಕಲಿತು ಕ್ರೀಡೆಯಲ್ಲೂ ಸಾಧನೆ ಮಾಡಿ ಸರ್ವತೋಮುಖ ಬೆಳವಣಿಗೆ ಸಾಧಿಸಿ. ಶೇಷಾದ್ರಿಪುರಂ ಕಾಲೇಜು ಉತ್ತಮ ಅಧ್ಯಾಪಕರನ್ನು ಒಳಗೊಂಡಿದೆ ಎಂದು ಕೇಳಿ ತಿಳಿದಿದ್ದೇನೆ. ಆಡಳಿತ ಮಂಡಳಿಯೂ ಸಹ ಉತ್ತಮ ಕೆಲಸ ಮಾಡುತ್ತಿದೆ. ಈ ಎಲ್ಲವನ್ನೂ ಬಳಸಿಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಿ ಎಂದು ಸಲಹೆಯಿತ್ತರು.

ಕಾರ್ಯಕ್ರಮಕ್ಕೆ ಅತಿಥಿಯಾಗಿ ಬಂದಿದ್ದ ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಶನ್ ಅಧ್ಯಕ್ಷರಾದ ಪ್ರಭಾಕರ್ ಎ.ಎನ್., ಮಾತನಾಡಿ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಯಲ್ಲಿ ಹೆಸರು ಮಾಡಿ ದೇಶಕ್ಕೆ ಕೀರ್ತಿತೆಗೆದುಕೊಂಡು ಬನ್ನಿ ಎಂದರು. ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಡಬ್ಲ್ಯೂ.ಡಿ. ಅಶೋಕ್ ಮಾತನಾಡಿ ನಮ್ಮ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು. ನಮ್ಮ ಸಂಸ್ಥೆಯು ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದು, ಗ್ರಾಮೀಣ ವಿದ್ಯಾರ್ಥಿಗಳನ್ನು ಮುಖ್ಯವಾಹಿನಿಗೆ ತರುವ ಉದ್ದೇಶ ಹೊಂದಿದೆ ಎಂದು ಹೇಳಿದರು.

ಕ್ರೀಡಾಕೂಟದಲ್ಲಿ ತುಮಕೂರಿನ ಎಸ್ಪಿ ಕೆ.ವಿ. ಅಶೋಕ್, ಕಾಲೇಜಿನ ಪ್ರಾಂಶುಪಾಲರು ಡಾ. ಜಗದೀಶ ಜಿ.ಟಿ., ಕ್ರೀಡಾ ನಿರ್ದೇಶಕರು ಮನೋಹರ್ ಎ.ಪಿ. ಭಾಗವಹಿಸಿದ್ದರು.

"ಜ್ಞಾನವೇ ಜೀವನದ ಸುಖವನ್ನು ಹೆಚ್ಚಿಸುವ ಬೆಳಕು" – ಖಲೀಲ್ ಗಿಬ್ರಾನ್

## ಶಿಕ್ಷಣದತ್ತಿಯು ಮೌಲ್ಯಯುತ ಶಿಕ್ಷಣ ನೀಡುತ್ತಿದೆ – ಶ್ರೀಮತ್ ಸ್ವಾಮಿ ಜಪಾನಂದಜೀ ಮಹಾರಾಜ್



**ತುಮಕೂರು,** ಶೇಷಾದ್ರಿಪುರಂ ಪದವಿ ಕಾಲೇಜು – ಶೇಷಾದ್ರಿಪುರಂ ಶಿಕ್ಷಣದತ್ತಿಯು ಹಿಂದಿನ ನಳಂದ ವಿಶ್ವವಿದ್ಯಾನಿಲಯದಂತೆ ರೂಪುಗೊಳ್ಳುತ್ತಿದೆ. ಅಂತಹ ಗುಣಮಟ್ಟದ ಶಿಕ್ಷಣವನ್ನು ದತ್ತಿಯು ನೀಡುತ್ತಿದೆ ಎಂದು ಶ್ರೀರಾಮಕೃಷ್ಣ ಸೇವಾಶ್ರಮ, ಪಾವಗಡದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಜಪಾನಂದಜೀ ಮಹಾರಾಜ್ ಅಭಿಪ್ರಾಯಪಟ್ಟರು. ತುಮಕೂರಿನ ಶೇಷಾದ್ರಿಪುರಂ ಕಾಲೇಜು ನ್ಯಾಕ್ ಬಿ++ ಶ್ರೇಣಿ ಪಡೆದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಸಂತೋಷಕೂಟ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ನಾಡೋಜ ಡಾ. ವೂಡೇ ಪಿ. ಕೃಷ್ಣರವರು ಕಾರ್ಯಕ್ರಮ ಕುರಿತು ಮಾತನಾಡುತ್ತ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯೇ ನಮ್ಮ ಮುಖ್ಯ ಉದ್ದೇಶ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಹೆಂಜಾರಪ್ಪ, ಸಹಾಯಕ ಕಾರ್ಯದರ್ಶಿಗಳಾದ ಎಂ.ಎಸ್. ನಟರಾಜು, ಧರ್ಮದರ್ಶಿಗಳಾದ ಬಿ.ಸಿ. ಲೋಕನಾಥ್, ಕೆ. ಕೃಷ್ಣಸ್ವಾಮಿ ಮತ್ತು ಕಾಲೇಜಿನ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷರಾದ ಡಬ್ಲ್ಯೂ.ಡಿ. ಅಶೋಕ್ ಹಾಗೂ ಪ್ರಾಂಶುಪಾಲರು ಹಾಜರಿದ್ದರು.

## ನಾಡಿಗೆ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಕೊಡುಗೆ ಅಪಾರ – ಡಾ. ಎಂ.ಆರ್. ಹುಲಿನಾಯ್ಕರ್



**ತುಮಕೂರು,** ಶೇಷಾದ್ರಿಪುರಂ ಪದವಿ ಕಾಲೇಜು – ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಲಾ ಸಂಭ್ರಮ–8 ವಾರ್ಷಿಕ ಹಬ್ಬವನ್ನು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಉದ್ಘಾಟಿಸಿ ಮಾತನಾಡುತ್ತಾ, 'ಈ ನಾಡಿಗೆ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಕೊಡುಗೆ ಅಪಾರ ಎಂದು ಹೇಳಿದರು. ಅಧ್ಯಕ್ಷತೆಯನ್ನು ವಹಿಸಿದ್ದ ನಾಡೋಜ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ಸಮಾಜಕ್ಕೆ ಒಳ್ಳೆಯ ಪ್ರಜೆಗಳನ್ನು ಕೊಡುವುದು ನಮ್ಮ ಸಂಸ್ಥೆಯ ಉದ್ದೇಶ ಎಂದರು. ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷರಾದ ಡಬ್ಲ್ಯೂ.ಡಿ. ಅಶೋಕ್, ಕಾಲೇಜಿನ ಪ್ರಾಂಶುಪಾಲರುಗಳು ಉಪಸ್ಥಿತರಿದ್ದರು.

## ಮಹಿಳಾ ಸಾಹಿತ್ಯದ ತಾತ್ವಿಕ ನೆಲೆಗಳು : ವಿಚಾರ ಸಂಕಿರಣ



**ಶೇಷಾದ್ರಿಪುರಂ,** ಶೇಷಾದ್ರಿಪುರಂ ಕಾಲೇಜು – ಇಲ್ಲಿನ ಕನ್ನಡ ಸಂಘ ಮತ್ತು ಕನ್ನಡ ವಿಭಾಗ ಹಾಗೂ ಕರ್ನಾಟಕ ಲೇಖಕಿಯರ ಸಂಘ (ರಿ), ಬೆಂಗಳೂರು, ಇವರ ಸಹಯೋಗದಲ್ಲಿ "ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಸಾಧ್ಯತೆ ಮತ್ತು ಸವಾಲುಗಳು" ಎಂಬ ವಿಚಾರದ ಕುರಿತಾಗಿ ಒಂದು ದಿನದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಡಾ. ಕೆ. ಸಂಧ್ಯಾರೆಡ್ಡಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಕೆ.ವೈ. ನಾರಾಯಣಸ್ವಾಮಿ, ಪ್ರತಿಭಾ ನಂದಕುಮಾರ್, ಭಾರತಿ ಹೆಗಡೆ ತಮ್ಮ ತಮ್ಮ ವಿಚಾರಗಳನ್ನು ಮಂಡಿಸಿದರು. ಕಾಲೇಜಿನ ಪ್ರಾಂಶುಪಾಲರು ಮೇಜರ್ ಡಾ. ಆನಂದಪ್ಪ ಉಪಸ್ಥಿತರಿದ್ದರು.

## ರಾಜ್ಯಮಟ್ಟದ ಕಲಾಸಂಸ್ಕೃತಿ ಉತ್ಸವ




**ಶೇಷಾದ್ರಿಪುರಂ,** ಶೇಷಾದ್ರಿಪುರಂ ಕಾಲೇಜು, ಏ. 24 – ಇಲ್ಲಿನ ಕನ್ನಡ ಸಂಘ ಮತ್ತು ಕನ್ನಡ ವಿಭಾಗವು ರಂಗಸಂಸ್ಥಾನದ ಸಹಯೋಗದೊಂದಿಗೆ ರಾಜ್ಯಮಟ್ಟದ ಕಲಾಸಂಸ್ಕೃತಿ ಉತ್ಸವವನ್ನು ಹಮ್ಮಿಕೊಂಡಿತ್ತು. ಡಾ. ಟಿ.ಎಚ್. ಆಂಜನಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಲೇಪಾಕ್ಷಿ ಸಂತೋಷರಾವ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳಿಂದ ವಿಚಾರ ಮಂಡನೆ




**ಶೇಷಾದ್ರಿಪುರಂ,** ಶೇಷಾದ್ರಿಪುರಂ ಕಾಲೇಜು – ಇಲ್ಲಿನ ಕನ್ನಡ ಸಂಘ ಮತ್ತು ಕನ್ನಡ ವಿಭಾಗವು ಸೆಂಟರ್ ಆಫ್ ಇಂಡಿಯನ್ ಇಥೋಸ್, ವಾಣಿಜ್ಯ ವಿಭಾಗ, ಸ್ನಾತಕೋತ್ತರ ಕೇಂದ್ರ ಹಾಗೂ ಬೆಂಗಳೂರಿನ ಇಸ್ಕಾನ್ ಅವರ ಸಂಯುಕ್ತಾಶ್ರಯದಲ್ಲಿ ಡಾ. ನಾ. ಮೊಗಸಾಲೆಯವರ 'ವಿಶ್ವಂಭರ' ಕಾದಂಬರಿ ಕುರಿತು ವಿದ್ಯಾರ್ಥಿಗಳ ವಿಚಾರಮಂಡನೆಯನ್ನು ಆಯೋಜಿಸಿತ್ತು. ಮುಖ್ಯ ಅತಿಥಿಗಳಾದ ಶ್ರೀಬ್ರಹ್ಮಾನಂದದಾಸರು ವಿಶ್ವಂಭರ ಕೃತಿಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಉಪಸ್ಥಿತರಿದ್ದರು.

## ವೃತ್ತಿ ಸಮಾಲೋಚನ ಕಾರ್ಯಕ್ರಮ



**ತುಮಕೂರು,** ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು – ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ವೃತ್ತಿ ಸಮಾಲೋಚನ ಕಾರ್ಯಕ್ರಮವನ್ನು ಭಾರತೀಯ ಸಿ.ಎ. ಇನ್ಸ್ಟಿಟ್ಯೂಟ್ ವತಿಯಿಂದ ಆಯೋಜಿಸಲಾಗಿತ್ತು. ವೃತ್ತಿ ಸಮಾಲೋಚನಾ ಮಾರ್ಗದರ್ಶಕರಾದ ಸಿಎ ಪ್ರಕಾಶ್‌ದೇಶನೂರ್‌ರವರು ವಿದ್ಯಾರ್ಥಿಗಳಿಗೆ ಮುಂದಿನ ಜೀವನದ ಯಶಸ್ವಿ ಸೂತ್ರಗಳನ್ನು ಮನಮುಟ್ಟುವಂತೆ ತಿಳಿಸಿಕೊಟ್ಟರು. ಕಾರ್ಯಕ್ರಮದ ಅತಿಥಿಗಳಾಗಿ ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲರಾದ ಡಾ. ಜಗದೀಶ ಜಿ.ಟಿ. ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಮಹಾಂತೇಶ ಹೆಚ್.ಬಿ. ವಹಿಸಿದ್ದರು.

"Those who have loved are those that have found God" – Guru Nanak